


## ಫುಟ್ಬಾಲ್ ಪ್ರತಿಕೃತಿ ಸ್ಮಾರ್ಟ್ ಆಗಲಿ

ವಿಶ್ವದ ಅತ್ಯಂತ ಜನಪ್ರಿಯ ಹತ್ತು ಕ್ರೀಡೆಗಳಲ್ಲಿ ಫುಟ್ಬಾಲ್ ಸಹ ಒಂದು. ಅತಿ ಹೆಚ್ಚು ಕ್ರೀಡಾಭಿಮಾನಿಗಳನ್ನೂ ಈ ಕ್ರೀಡೆ ಪಡೆದುಕೊಂಡಿದೆ. ಭಾರತ ಸೇರಿದಂತೆ ಅನೇಕ ತಂಡಗಳು ಇನ್ನೂ ವಿಶ್ವಕಪ್‌ಗೆ ಅರ್ಹತೆ ಪಡೆಯಲು ಹರಸಾಹಸಪಡುತ್ತಿದ್ದರೂ ತಂಡಗಳಿಗೆ ಅಭಿಮಾನಿಗಳ ಕೊರತೆ ಇಲ್ಲ. ಅದಕ್ಕೆ ತಾಜಾ ಉದಾಹರಣೆ ನಮ್ಮ ದಾವಣಗೆರೆ. ಇಲ್ಲಿನ ಸಿ.ಜಿ. ಆಸ್ಪತ್ರೆ ಸಮೀಪದ ಗುಂಡಿ ಮಹಾದೇವಪ್ಪ ಕಲ್ಯಾಣ ಮಂಟಪದ ಬಳಿಯ ವೃತ್ತದಲ್ಲಿ ಫುಟ್ಬಾಲ್ ಕ್ರೀಡೆಯ ಅತ್ಯಾಕರ್ಷಕ ಪ್ರತಿಕೃತಿ ಸ್ಥಾಪಿಸಿದ್ದು, ದಾವಣಗೆರೆಯ ನಿವಾಸಿಗಳ ಕ್ರೀಡಾಭಿಮಾನದ ಸಂಕೇತವಾಗಿದೆ. ಆದರೆ, ದಾವಣಗೆರೆಯ ರಾಜಕೀಯ ಬದಲಾದಂತೆಲ್ಲ ಇಲ್ಲಿನ ಫುಟ್ಬಾಲ್ ಪ್ರತಿಕೃತಿಯ ಬಣ್ಣವೂ ಬದಲಾಗುತ್ತಿರುವುದು ದುರಂತವೇ ಸರಿ. ಈ ಪ್ರತಿಕೃತಿಯ ನಿಲುಗಂಬಗಳು ಕೆಲವೊಮ್ಮೆ ಶ್ವೇತ ವರ್ಣದಲ್ಲಿದ್ದರೆ, ಇನ್ನೊಮ್ಮೆ ಕೇಸರಿ ವರ್ಣದಲ್ಲಿರುತ್ತದೆ.

ಪ್ರತಿ ನಾಲ್ಕು ವರ್ಷಗಳಿಗೊಮ್ಮೆ ನಡೆಯುವ ಫುಟ್ಬಾಲ್ ವಿಶ್ವಕಪ್ ಪಂದ್ಯಾವಳಿಯನ್ನು ಈ ಬಾರಿ ಅರಬ್ ರಾಷ್ಟ್ರದ ಕತಾರ್‌ನಲ್ಲಿ ಆಯೋಜಿಸಲಾಗಿದೆ. ನೆಚ್ಚಿನ ಫುಟ್ಬಾಲ್ ಆಟಗಾರರ ಕಾಲ್ಚಳಕವನ್ನು ಕಣ್ತುಂಬಿಕೊಳ್ಳಲು ಜಗತ್ತಿನ ಎಲ್ಲ ರಾಷ್ಟ್ರಗಳ ಅಭಿಮಾನಿಗಳು ಕತಾರ್‌ನತ್ತ ಮುಖಮಾಡುತ್ತಿದ್ದಾರೆ. ಈ ಸಂದರ್ಭದಲ್ಲಾದರೂ ಈ ಫುಟ್ಬಾಲ್ ಪ್ರತಿಕೃತಿಯನ್ನು ರಾಜಕೀಯ ಥ್ಸುಲ್ಲಕಕ್ಕೆ ಬಲಿಗೊಡದೆ ಕ್ರೀಡಾಮನೋಭಾವದಿಂದ ಅಂದವಾಗಿ ಚೆಂದವಾಗಿ ಕಾಣುವಂತೆ ಮಾಡಬೇಕಿದೆ.

—ರಘುನಾಥರಾವ್ ತಾಪ್ಸೆ, ದಾವಣಗೆರೆ

## ಮೂಕವೇದನೆ ಮನುಷ್ಯನಿಗೆ ಬರದೇ?



ಕೆಲವು ಮನುಷ್ಯರು ತಾವು ಎಂದೂ ಸುಖವಂಚಿತರಾಗುವುದಿಲ್ಲ ಎಂಬ ಹಮ್ಮಿನಿಂದ ಬೀಗುತ್ತಿರುತ್ತಾರೆ. ಅಂತಹವರ ಬಡಾಯಿಯನ್ನು ಕಡಿಮೆ ಮಾಡಲು ಇದು ಒಂದು ಚಿಕ್ಕ ದೃಷ್ಟಾಂತ.

ಬಲಹೀನ ಮೂಕಪ್ರಾಣಿ ಕುದುರೆಯನ್ನು ರಸ್ತೆ ಬದಿ ಗಾಡಿಯಿಂದ ಇಳಿಸಿ, ಅದನ್ನು ಅಲ್ಲಿಯೇ ಬಿಟ್ಟು ಹೋಗಿದ್ದನ್ನು ಹಲವರು ನೋಡಿದ್ದರು. ವಿಷಯ ತಿಳಿದು ಪ್ರಾಣಿದಯಾಲಯದವರು ಅದನ್ನು ರಕ್ಷಿಸಲು ಕೊಂಡೊಯ್ದಿದ್ದರು. ಅದರ ಆರೋಗ್ಯವಂತ ಮರಿ ಬಹಳ ದಿನಗಳ ಕಾಲ, ಅಲ್ಲಿಯೇ ಬಂದು ಆ ಜಾಗವನ್ನು ಮೂಸಿ ಮೂಸಿ ನೋಡಿ ಹಿಂದಿರುಗುತ್ತಿತ್ತು.

ಈ ಇಡೀ ಪ್ರಸಂಗವು ಕುದುರೆ/ಕತ್ತೆಗಳನ್ನು ಪೂರಾ ನಿತ್ರಾಣವಾಗುವವರೆಗೂ ದುಡಿಸಿಕೊಂಡು ನಂತರ ಅವುಗಳನ್ನು ತಮ್ಮಿಂದ ದೂರ ಮಾಡುವ ಮನುಷ್ಯನ ಕ್ರೌರ್ಯಕ್ಕೆ ಕನ್ನಡಿ ಹಿಡಿದಿದೆ. ಮನುಷ್ಯ, 'ತನಗೂ ಅಂತಹ ಪರಿಸ್ಥಿತಿ ಬರದೆ ಇರದು' ಅನ್ನುವುದನ್ನು ಮರೆತು ಈ ರೀತಿ ವರ್ತಿಸುವುದನ್ನು ನೋಡಿದರೆ ಬೇಜಾರಾಗುತ್ತದೆ. ಇಂತಹ ಅಮಾನವೀಯ ನಡೆಯನ್ನು ಬಿಟ್ಟು ಬಾಳುವುದು ಸೂಕ್ತವಲ್ಲವೇ?

—ಎ.ಬಿ. ಮಾಲತಿ, ಮೈಸೂರು



## ಬಯಲಲ್ಲಿ ಚದುರಂಗ!

ಭಾರತ ಮೂಲದ ಚದುರಂಗದಾಟ ಇಬ್ಬರು ಆಡಬಹುದಾದ ಮನೆಯೊಳಗಿನ ಕ್ರೀಡೆ. 64 ಕಪ್ಪು ಬಿಳುಪು ಚೌಕಗಳಿರುವ, 32 ಕಾಯಿಗಳಿರುವ ಈ ಆಟದಿಂದ ನೆನಪು, ಏಕಾಗ್ರತೆ ಮತ್ತು ಬುದ್ಧಿಶಕ್ತಿ ಚುರುಕಾಗುತ್ತದೆ. ಎದುರಾಳಿಯಿಲ್ಲದೆ ಕಂಪ್ಯೂಟರ್‌ನಲ್ಲಿಯೂ ಈ ಆಟವನ್ನು ತಾಲೀಮಿಗಾಗಿ ಆಡಬಹುದು. ಆದರೆ ಇಂತಹ ಮನೆಯೊಳಗಿನ ಆಟವನ್ನು ಬಯಲಲ್ಲಿಯೂ ಆಡಬಹುದು ಎನ್ನುವುದಕ್ಕೆ ಈ ಚಿತ್ರ ಸಾಕ್ಷಿ. ತಮಿಳುನಾಡಿನ ಸೇಲಂ ಜಿಲ್ಲೆ ಎರ್ಕಾಡು ಗಿರಿಧಾಮದಲ್ಲಿರುವ ಗ್ರ್ಯಾಂಡ್ ಪ್ಯಾಲೇಸ್ ಹೋಟೇಲಿನ ಎದುರು ಇರುವ ಎತ್ತರದ ವ್ಯೂ ಪಾಯಿಂಟ್ ಪ್ರದೇಶದಲ್ಲಿ ನೆಲದಲ್ಲಿಯೇ ಚದುರಂಗದ ಚೌಕಗಳಿವೆ. ಕಾಯಿಗಳನ್ನು ಎತ್ತಿಡುವಷ್ಟು ಹಗುರವಾದ ವಸ್ತುವಿನಿಂದ ಮಾಡಲಾಗಿದೆ. ಯಾರು ಬೇಕಾದರೂ ಕಾಸಿಲ್ಲದೆ ಇಲ್ಲಿ ಚದುರಂಗದಾಟ ಆಡಬಹುದು.

—ಧರ್ಮಾನಂದ ಶಿರ್ವ, ಬೆಂಗಳೂರು